ಎಂ.ವಿ.ಸಿ - 200/2025
ಪಿ.ಡಬ್ಲ್ಯು - 01

**ದಿನಾಂಕ 06-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಅಪಘಾತದ ದಿನ ಶಿರ್ವ ಮಂಚಕಲ್ ನಿಂದ ಮನೆ ಕಡೆಗೆ ಹೋಗುತಿದ್ದೆ . ನಾವು 3 ಜನ ಪ್ಯಾಸೆಂಜರ್ ನಮ್ಮ ರಿಕ್ಷಾದಲ್ಲಿ ಇದ್ದೆವು . ರಿಕ್ಷಾ ಚಲಾಯಿಸುತಿದ್ದ ವ್ಯಕ್ತಿ ನನ್ನ ಸ್ನೇಹಿತನಲ್ಲ . ನಾವು ರಿಕ್ಷಾವನ್ನು ಬಾಡಿಗೆಗೆ ಪಡೆದಿದ್ದೆವು . ರಿಕ್ಷಾ ಚಲಾಯಿಸುತಿದ್ದ ವ್ಯಕ್ತಿ ಗೆ ಡಿಎಲ್ ಇತ್ತು. ರಿಕ್ಷಾ ಚಾಲಕನ ನಿದಾನವಾಗಿ ಹೋಗುತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆತ ವೇಗದಿಂದ ಹೋಗುತಿದ್ದ ಎಂದು ತಿಳಿಸಿರುತಾರೆ. ನಾವು ರಿಕ್ಷಾ ಚಾಲಕನ ಜೊತೆ ಅದೇ ಮೊದಲನೇ ದಿನ ಬಾಡಿಗೆಗೆ ಪಡೆದು ಹೋಗುತಿದ್ದೆವು ಅದಕ್ಕಿಂತ ಮೊದಲು ಹೋಗಿಲ್ಲ . ರಿಕ್ಷಾ ಚಾಲಕ ನಿದಾನವಾಗಿ ವಾಹನ ಚಲಾಯಿಸುತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆತ ಅತೀ ವೇಗವಾಗಿ ಹೋಗುತಿದ್ದ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ನಾನೇ ದೂರು ಕೊಟ್ಟಿರುತ್ತೇನೆ. ನಾನು ಪ್ರಾಥಮಿಕ ಚಿಕಿತ್ಸೆ ಶಿರ್ವ ಆಸ್ಪತ್ರೆಯಲ್ಲಿ ಪಡೆದು ನಂತರ ಸಿಟಿ ಆಸ್ಪತ್ರೆ ಗೆ ಬಂದು ಚಿಕಿತ್ಸೆ ಪಡೆದು ನಂತರ ಹೈಟೆಕ್ ಆಸ್ಪತ್ರೆ ಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಹೈಟೆಕ್ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ 2 ದಿನ ಚಿಕಿತ್ಸೆ ಪಡೆದಿರುತ್ತೇನೆ . ಡಿಸ್ ಚಾರ್ಜ್ ಮಾಡಿದ ನಂತರ ವೈದರು ನನಗೆ ಹೇಳಿದ ದಿನದಂದು ನಾನು ಪುನಃ ಚಿಕಿತ್ಸೆ ಗೆ ಹೋಗಿರುತ್ತೇನೆ . ನನಗೆ ಆದ ಗಾಯಗಳು ಗುಣಮುಖವಾಗಿದೆ ಎಂದರೆ ಸರಿಯಲ್ಲ. ನನಗೆ ಕೈ, ಕಾಲಿಗೆ ಮತ್ತು ಎದೆ ಭಾಗಕ್ಕೆ

ಗಾಯಗಳು ಆಗಿರುತ್ತದೆ . ನನ್ನ ಕೈಗೆ ಒಳಸಾಧನ ಹಾಕಿರುತ್ತಾರೆ . ನನಗೆ ಈಗ ಯಾವುದೇ ಚಿಕಿತ್ಸೆ ಬಾಕಿ ಇಲ್ಲ. ಅಪಘಾತಕ್ಕಿಂತ ಮೊದಲು ನಾನು ಮೀನು ವ್ಯಾಪಾರ ಮತ್ತು ಮೇಸ್ತ್ರಿ ಕೆಲಸ ಮಾಡುತಿದ್ದೆ . ನನಗೆ ಪ್ರತಿದಿನ ಕೆಲಸ ಇತ್ತು . ಈಗ ನನಗೆ ಯಾವುದೇ ಕೆಲಸ ಮಾಡಲು ಆಗುವುದಿಲ್ಲ . ಕೆಲಸ ಮಾಡಬಾರದು ಎಂದು ವೈದ್ಯರು ನನಗೆ ಸರ್ಟಿಫಿಕೇಟ್ ಕೊಟ್ಟಿಲ್ಲ . ಅಪಘಾತದ ಸಮಯದಲ್ಲಿ ನಾನು ಪ್ರತಿದಿನ ರೂ 1800 ರಿಂದ 2000 ಸಂಪಾದನೆ ಮಾಡುತಿದ್ದೆ . ಈ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ . ಅಪಘಾತದಿಂದ ನನ್ನ ಭವಿಷ್ಯ ಜೀವನಕ್ಕೆ ತೊಂದರೆ ಇಲ್ಲ ಎಂದರೆ ಸರಿಯಲ್ಲ . ನಾನು ಇನ್ಸುರೆನ್ಸ್ ನಿಂದ ಯಾವುದೇ ಹಣ ಪಡೆದಿಲ್ಲ . ನಾನು ಹಾಜರುಪಡಿಸಿದ ಬಿಲ್ಲುಗಳು ಅಪಘಾತಕ್ಕೆ ಸಂಬಂಧಿಸಿದ ಬಿಲ್ಲುಗಳು ಅಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ರೀತಿ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಹಾಕಿರುತೇನೆ ಎಂದರೆ ಸರಿಯಲ್ಲ . ಅಪಘಾತಕ್ಕೆ ರಿಕ್ಷಾ ಚಾಲಕನ ತಪ್ಪು ಇಲ್ಲದೇ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.

ಎಂ.ವಿ.ಸಿ - 200/2025
ಪಿ.ಡಬ್ಲ್ಯು - 01